I/12671/2023

ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

E-6948 DSERT/SSKH/OTH/6/2022 ದಿನಾಂಕ:21/06/2023

**ಜ್ಞಾಪನ**

ವಿಷಯ:2023-24 ನೇ ಸಾಲಿನಲ್ಲಿ ಪ್ರೌಢ ಶಾಲಾ ಶಿಕ್ಷಕರ ವಿಷಯವಾರು ಆನ್‌ಲೈನ್ ತರಬೇತಿ ನೀಡಲು ಅಗತ್ಯ ಕ್ರಮ ವಹಿಸುವ ಬಗ್ಗೆ.

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರ ವಿಷಯವಾರು ಆನ್‌ಲೈನ್ ತರಬೇತಿ ನೀಡಲು ಅಗತ್ಯ ಕ್ರಮವಹಿಸುವ ಕುರಿತು ಪ್ರತಿ ಜಿಲ್ಲೆಯ ನೋಡಲ್ ಅಧಿಕಾರಿಗಳು, ತಾಂತ್ರಿಕ ಸಹಾಯಕರು ಮತ್ತು ಟ್ಯಾಬ್ಲ್ ಸಂಪನ್ಮೂಲ ವ್ಯಕ್ತಿಗಳ ಸಭೆ ನಡೆಸಿ, 2023-24ನೇ ಸಾಲಿನ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಿದೆ. ಆನ್‌ಲೈನ್ ತರಬೇತಿಗಳನ್ನು ಗುಣಮಟ್ಟದಲ್ಲಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಪಾತ್ರ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳು, ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಗೆ ವಿಷಯವಾರು ಬೋಧಿಸುತ್ತಿರುವ ಶಿಕ್ಷಕರು ಹಾಗೂ ಇನ್ನುಳಿದ ಸ್ವ ಆಸಕ್ತ ಶಾಲಾ ಶಿಕ್ಷಕರು ಆನ್‌ಲೈನ್ ತರಬೇತಿಯನ್ನು ದೀಕ್ಷಾ ಪೋರ್ಟಲ್ ಮೂಲಕ ಎಸ್.ಎಸ್.ಓ ಅಥವಾ ಸೈನ್ ಇನ್ ವಿತ್ ಗೂಗಲ್ ಮೂಲಕ ಪಡೆಯಲು ರಾಜ್ಯ ಹಂತದಿಂದ ಕೋರ್ಸ್‌ಗಳನ್ನು ಲಾಂಚ್ ಮಾಡಲಾಗುತ್ತಿದೆ. ಈ ಆನ್‌ಲೈನ್ ತರಬೇತಿಯು ಅತ್ಯಂತ ಮಹತ್ವವಾದ ತರಬೇತಿ ಕಾರ್ಯಕ್ರಮವಾಗಿದ್ದು, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ರಾಜ್ಯಾದ್ಯಂತ ಏಕ ಸ್ವರೂಪದಲ್ಲಿ ಎಲ್ಲಾ ಶಿಕ್ಷಕರನ್ನು ತಲುಪಿದೆ. ಈ ಕಾರ್ಯಕ್ರಮವು ತನ್ನ ಸ್ವರೂಪಕ್ಕೆ ಅನುಗುಣವಾಗಿ ಅನುಷ್ಠಾನವಾಗಲು ಪ್ರೌಢಶಾಲಾ ಶಿಕ್ಷಕರ ವರ್ಗವು ಕೈ ಜೋಡಿಸಬೇಕಿದೆ. ಈ ನಿಟ್ಟಿನಲ್ಲಿ ವಿವಿಧ ಅಧಿಕಾರಿಗಳಿಗೆ ವಿವಿಧ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ. ರಾಜ್ಯದ ಎಲ್ಲಾ ಡಯಟ್‌ಗಳು ಅಗತ್ಯ ಪೂರ್ವಸಿದ್ಧತೆಯೊಂದಿಗೆ ಯೋಜಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳು ಮತ್ತು ಉನ್ನತೀಕರಿಸಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ಆನ್‌ಲೈನ್‌ನಲ್ಲಿ ಶೂನ್ಯ ಬಜೆಟ್ ಅಡಿಯಲ್ಲಿ ನೀಡಲಾಗುತ್ತಿದೆ.

ಉರ್ದು ಮತ್ತು ಇತರೆ ಭಾಷೆಯ ಶಿಕ್ಷಕರು ಕನ್ನಡವನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವಿದ್ದಲ್ಲಿ, ಸ್ವ ಇಚ್ಛೆಯಿಂದ ಸದರಿ ಕೋರ್ಸ್‌ಗಳನ್ನು ತರಬೇತಿಯನ್ನು ಪಡೆಯಬಹುದಾಗಿದೆ, ಯಾವುದೇ ರೀತಿಯ ಒತ್ತಾಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ಮುಖಾಮುಖಿ ತರಬೇತಿಯನ್ನು ಪಡೆಯಬಹುದಾಗಿರುತ್ತದೆ.

2023-24ನೇ ಸಾಲಿನಲ್ಲಿ ಸರ್ಕಾರಿ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ವಿಷಯವಾರು ಆನ್‌ಲೈನ್ ತರಬೇತಿ ಕೋರ್ಸ್‌ಗಳನ್ನು ನಿಗದಿಪಡಿಸಲಾಗಿದ್ದು, ಈ ತರಬೇತಿಯನ್ನು ಎಲ್ಲಾ ಶಿಕ್ಷಕರು ಪಡೆದುಕೊಳ್ಳಲು ತಿಳಿಸಿದೆ. ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಕೋರ್ಸ್‌ಗಳ ಸಂಖ್ಯೆ ಮತ್ತು ವಿವರ | ಕೋರ್ಸ್‌ಗಳ ಲಿಂಕ್ |
|---|---|---|
| 01 | KA_NEP_GC_170 ಪ್ರೌಢ ಶಾಲಾ **ಗಣಿತ** ಶಿಕ್ಷಕರಿಗಾಗಿ ತರಬೇತಿ ಕೋರ್ಸ್ | https://diksha.gov.in/explore-course/course/do_313797984036323328123 |
| 02 | KA_NEP_GC_171_ಪ್ರೌಢ ಶಾಲಾ **ವಿಜ್ಞಾನ** ಶಿಕ್ಷಕರ ತರಬೇತಿ | https://diksha.gov.in/explore-course/course/do_3137973156206837761521 |
| 03 | KA_NEP_GC_172_ಪ್ರೌಢ ಶಾಲಾ **ಸಮಾಜ ವಿಜ್ಞಾನ** ಶಿಕ್ಷಕರ ತರಬೇತಿ ಮಾಡ್ಯೂಲ್ | https://diksha.gov.in/explore-course/course/do_3137973231736258561527?referrer=utm_source%3Dmobile%26utm_campaign%3Dshare_content |
| 04 | KA_NEP_GC_173_ಪ್ರೌಢ ಶಾಲಾ **ದೈಹಿಕ ಶಿಕ್ಷಣ** ಶಿಕ್ಷಕರ ತರಬೇತಿ ಮಾಡ್ಯೂಲ್ | https://diksha.gov.in/explore-course/course/do_3137359424695173121203 |

ಈ ತರಬೇತಿಯು 31/10/2023 ರವರೆಗೆ ಆನ್‌ಲೈನ್ (DIKSHA app) ನಲ್ಲಿ ಲಭ್ಯವಾಗಲಿದೆ. ಆಯಾ ವಿಷಯ ಬೋಧಿಸುತ್ತಿರುವ ಪ್ರೌಢಶಾಲಾ ಶಿಕ್ಷಕರು ಮತ್ತು ಉನ್ನತೀಕರಿಸಿದ ಪ್ರಾಥಮಿಕ ಶಾಲೆಯ 8ನೇ ತರಗತಿಗೆ

ಬೋಧಿಸುತ್ತಿರುವ ಶಿಕ್ಷಕರು ತರಬೇತಿ ಪಡೆಯಲು ಅಗತ್ಯ ಬೆಂಬಲ ಮತ್ತು ಮಾರ್ಗದರ್ಶನ ನೀಡಿ ಕ್ರಮವಹಿಸಲು ಡಯಟ್‌ಗಳಿಗೆ ಸೂಚಿಸಿದೆ.

ತರಬೇತಿಯ ಪೂರ್ವಸಿದ್ಧತೆಗೆ ಟೆಲಿಗ್ರಾಮ್ ಗ್ರೂಪ್‌ನ್ನು ರಚಿಸಲು ಮಾಡಿಕೊಳ್ಳಬೇಕಾದ ವಿವರಗಳನ್ನು, ಬ್ಲಾಕ್ ಮತ್ತು ಜಿಲ್ಲಾ ಹಂತದ ತಾಂತ್ರಿಕ ಮತ್ತು ಅನುಷ್ಠಾನ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಸೂಚಿಸಲಾಗಿದೆ.

ಇವುಗಳಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳ ಮೂಲಕ ಡಯಟ್ ಕ್ರಮ ವಹಿಸಿ ಪ್ರಗತಿ ಸಾಧಿಸುವುದು.

**ಪಾತ್ರ ಮತ್ತು ಜವಾಬ್ದಾರಿಗಳು:**

**ಜಿಲ್ಲಾ ತಾಂತ್ರಿಕ ತಂಡದ ನೋಡಲ್ ಅಧಿಕಾರಿ.**

1. ಪ್ರೌಢ ಶಾಲಾ ವಿಷಯವಾರು ಆಧಾರಿತ ಆನ್‌ಲೈನ್ ಕೋರ್ಸ್‌ಗಳನ್ನು ಸರ್ಕಾರಿ ಶಾಲಾ ಶಿಕ್ಷಕರಿಗೆ ಹಾಗೂ ಅಧಿಕಾರಿಗಳಿಗೆ ಒದಗಿಸಿ ಅವರು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವುದು.
2. ಈ ಆನ್‌ಲೈನ್ ಕೋರ್ಸ್‌ಗಳನ್ನು ಸರ್ಕಾರಿ ಶಾಲಾ ಶಿಕ್ಷಕರು ಮತ್ತು ಅಧಿಕಾರಿಗಳಿಗೆ ಒದಗಿಸಿ ಅವರು ಪೂರ್ಣಗೊಳಿಸಲು ನೋಡಲ್ ಅಧಿಕಾರಿಗಳ ಮೂಲಕ ಕ್ರಮವಹಿಸುವುದು.
3. ವಿವಿಧ ಹಂತದ ಉಸ್ತುವಾರಿ ಅಧಿಕಾರಿಗಳ ವಾಟ್ಸಾಪ್ ಗುಂಪಿನಲ್ಲಿ ಈ ಕೋರ್ಸ್‌ಗಳ ಬಗ್ಗೆ ಕಾಲ ಕಾಲಿಕವಾಗಿ ಮಾಹಿತಿ ವಿನಿಮಯ ಮಾಡುವುದು. ಜಿಲ್ಲಾ ಮತ್ತು ಬ್ಲಾಕ್ ಹಂತದ ಅಧಿಕಾರಿಗಳ ಮತ್ತು ಸಿ.ಆರ್.ಪಿಗಳ ಸಭೆಯಲ್ಲಿ ಕೋರ್ಸ್‌ಗಳ ಬಗ್ಗೆ ವ್ಯಾಪಕವಾಗಿ ಪ್ರಚುರಪಡಿಸಿ, ನಿಗದಿತ ವೇಳೆಯೊಳಗೆ ಶೇ.100 ಗುರಿ ಸಾಧನೆಗೆ ಅಗತ್ಯ ಕ್ರಮವಹಿಸುವುದು.
4. ಜಿಲ್ಲಾಮಟ್ಟದ ಉಪನಿರ್ದೇಶಕರು, ಡಯಟ್ ಪ್ರಾಂಶುಪಾಲರು, ಶಿಕ್ಷಣಾಧಿಕಾರಿಗಳು, ಡಯಟ್ ಉಪನ್ಯಾಸಕರು, ವಿಷಯ ಪರಿವೀಕ್ಷಕರು, ತಾಲ್ಲೂಕು ಮಟ್ಟದ ಬಿ.ಇ.ಒ. ಮತ್ತು ಬಿ.ಆರ್.ಸಿ ಅವರುಗಳನ್ನು ಒಳಗೊಂಡಂತೆ ಎಲ್ಲಾ ಅಧಿಕಾರಿಗಳು ಕೋರ್ಸ್‌ಗಳನ್ನು ಪೂರ್ಣಗೊಳಿಸಬೇಕು.
5. ತಮ್ಮ ಜಿಲ್ಲಾಹಂತದಲ್ಲಿ ಮಾಹೆವಾರು ಪ್ರೌಢಶಾಲಾ ವಿಷಯವಾರು ಆಧಾರಿತ ಕೋರ್ಸ್‌ಗಳ ತರಬೇತಿಯ ಅನುಷ್ಠಾನ ಮತ್ತು ಪ್ರಗತಿಯನ್ನು ಡಯಟ್ ಪ್ರಾಂಶುಪಾಲರು ಖಚಿತಪಡಿಸಿಕೊಳ್ಳಬೇಕು. ಇದಕ್ಕಾಗಿ ಉಪನಿರ್ದೇಶಕರು (ಆಡಳಿತ) ಇವರೊಂದಿಗೆ ಸಮನ್ವಯವನ್ನು ಸಾಧಿಸುವುದು. ಡಯಟ್‌ನ ಅಧಿಕಾರಿಗಳು ತಮ್ಮ ನೋಡಲ್ ತಾಲ್ಲೂಕುಗಳಿಗೆ ಭೇಟಿ ನೀಡಿದಾಗ, ಬಿ.ಆರ್.ಸಿ. ಅವರೊಂದಿಗೆ ಕೋರ್ಸ್‌ನ ಪ್ರಗತಿಯನ್ನು ಪರಿಶೀಲಿಸುವುದು. ಬಿ.ಆರ್.ಸಿ.ಯಲ್ಲಿ ಸಿ.ಆರ್.ಪಿ.ಗಳ ಸಭೆಗಳಲ್ಲಿ ಡಯಟ್‌ನ ನೋಡಲ್ ಅಧಿಕಾರಿಗಳು ಭಾಗವಹಿಸಿ, ಕೋರ್ಸ್‌ನ ಪ್ರಗತಿಯ ಬಗ್ಗೆ ಅವಲೋಕಿಸಿ ಸೂಕ್ತ ಮಾರ್ಗದರ್ಶನ ನೀಡುವುದು. ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿಯೂ ಪ್ರತಿ ಶಿಕ್ಷಕರು ತರಬೇತಿಯನ್ನು ಪಡೆದುಕೊಳ್ಳುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು. ಉಪನಿರ್ದೇಶಕರು (ಆಡಳಿತ) ಅವರ ಕಛೇರಿಯ ಶಿಕ್ಷಣಾಧಿಕಾರಿಗಳು ಮತ್ತು ವಿಷಯ ಪರಿವೀಕ್ಷಕರೂ ಶಾಲೆಗಳಿಗೆ, ಬಿ.ಇ.ಒ. ಕಛೇರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಬಗ್ಗೆ ಪರಿಶೀಲಿಸುವುದು. ಒಟ್ಟಾರೆ ಜಿಲ್ಲೆಯಲ್ಲಿ ಈ ಕೋರ್ಸ್‌ಗಳ ಪ್ರಗತಿಯನ್ನು ಉಪನಿರ್ದೇಶಕರು (ಆಡಳಿತ) ಹಾಗೂ ಡಯಟ್ ಪ್ರಾಂಶುಪಾಲರು ಪ್ರತಿ 15 ದಿನಗಳಿಗೊಮ್ಮೆ ಪರಿಶೀಲಿಸುವುದು.
6. ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಪ್ಪದೇ ಭಾಗವಹಿಸಿ ಪ್ರಗತಿ ವಿವರಗಳ ಪ್ರಸ್ತುತಿ ಪಡಿಸುವುದು.
7. **ತಾಂತ್ರಿಕ ಸಹಾಯಕರು/ ಐ.ಸಿ.ಟಿ. ಜ್ಞಾನವುಳ್ಳ ಒಬ್ಬರು ಕ್ರಿಯಾಶೀಲ ಉಪನ್ಯಾಸಕರು**

   ಡಯಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಹಾಯಕರನ್ನು ಈ ಕಾರ್ಯಕ್ಕೆ ಕಡ್ಡಾಯವಾಗಿ ನಿಯೋಜಿಸಿಕೊಳ್ಳುವುದು. ತಾಂತ್ರಿಕ ಸಹಾಯಕರು ಲಭ್ಯವಿಲ್ಲದಿದ್ದಲ್ಲಿ ಐ.ಸಿ.ಟಿ. ಜ್ಞಾನವುಳ್ಳ ಒಬ್ಬರು ಕ್ರಿಯಾಶೀಲ ಡಯಟ್ ಉಪನ್ಯಾಸಕರು ಜಿಲ್ಲಾ ತಾಂತ್ರಿಕ ತಂಡದ ಸದಸ್ಯರಾಗಿರುತ್ತಾರೆ.

1. ಶಿಕ್ಷಕರ ಮತ್ತು ಅಧಿಕಾರಿಗಳ ಲಾಗಿನ್ ಸಮಸ್ಯೆಗಳನ್ನು ಬಗೆ ಹರಿಸುವುದು. ಕೋರ್ಸ್ ತೆಗೆದುಕೊಳ್ಳುವಾಗ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸಲು ನೆರವಾಗುವುದು.
2. ಪ್ರತಿ ಕೋರ್ಸ್‌ನ ಮಾಹಿತಿಯನ್ನು ಡೌನ್‌ಲೋಡ್ ಮಾಡುವುದು ಹಾಗೂ ಕೋರ್ಸ್‌ಗೆ ಸೇರಿದ ಒಟ್ಟು ಶಿಕ್ಷಕರ ಸಂಖ್ಯೆ ಶೇ.100, ಪೂರ್ಣಗೊಳಿಸಿದ ಶಿಕ್ಷಕರ ಸಂಖ್ಯೆ ಹಾಗೂ ಸರ್ಟಿಫಿಕೇಟ್ ಪಡೆದ ಶಿಕ್ಷಕರ ಸಂಖ್ಯೆ ಕುರಿತಾದ ಪ್ರಗತಿಯ ಮಾಹಿತಿಯನ್ನು ಪ್ರತಿ ಮಾಹೆಯ ಅಂತ್ಯಕ್ಕೆ ನೀಡುವುದು. ಮಾಸಿಕವಾಗಿ ದೀಕ್ಷಾ ಮಾಡ್ಯೂಲ್‌ಗಳ ಪ್ರಗತಿಯ ವರದಿಯನ್ನು ಸಿದ್ಧಪಡಿಸುವುದು. ಪ್ರತಿ ಮಾಹೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಿ.ಪಿ.ಟಿ ಮೂಲಕ ಪ್ರಸ್ತುತ ಪಡಿಸುವುದು.
3. ಶೇ.100 ಗುರಿ ಸಾಧಿಸಲು ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅಗತ್ಯ ತಾಂತ್ರಿಕ ನೆರವು ನೀಡುವುದು.

**3) ಐ.ಸಿ.ಟಿ. ಜ್ಞಾನವಿರುವ ಅಥವಾ ಟ್ಯಾಬ್ಲ್ ಸಂಪನ್ಮೂಲ ವ್ಯಕ್ತಿ**

1. ಶಾಲಾ ಕೆಲಸ ಕಾರ್ಯಗಳಿಗೆ ಧಕ್ಕೆಯಾಗದೇ ಕಾರ್ಯನಿರ್ವಹಿಸಬಲ್ಲ ಐ.ಸಿ.ಟಿ. ಜ್ಞಾನವಿರುವ ಅಥವಾ ಟ್ಯಾಬ್ಲ್ ಸಂಪನ್ಮೂಲ ವ್ಯಕ್ತಿಯು ಜಿಲ್ಲಾ ಹಂತದ ತಾಂತ್ರಿಕ ತಂಡದ ಸದಸ್ಯರಾಗಿರುತ್ತಾರೆ.
2. ಶಿಕ್ಷಕರು ಮತ್ತು ಅಧಿಕಾರಿಗಳು ಕೋರ್ಸ್‌ಗಳನ್ನು ಪೂರ್ಣಗೊಳಿಸಲು ಬೇಕಾಗುವ ಅಗತ್ಯ ಶೈಕ್ಷಣಿಕ ನೆರವನ್ನು ನೀಡುವುದು. ಕೋರ್ಸ್ ಕುರಿತಾದ ವೆಬಿನಾರ್/

ಯೂಟ್ಯೂಬ್ ತರಗತಿ ನಡೆಸಲು ಅಗತ್ಯ ಸಹಕಾರ ನೀಡುವುದು. ಕೋರ್ಸ್‌ಗಳನ್ನು ಸೃಜಿಸಲು/ ಎಡಿಟ್ ಮಾಡಲು/ ಲಾಂಚ್ ಮಾಡಲು ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮತ್ತು ತಾಂತ್ರಿಕ ಸಹಾಯಕರಿಗೆ ಅಗತ್ಯ ನೆರವು ನೀಡುವುದು.

3. ಪ್ರತಿ ತಿಂಗಳು ಈ ಕೆಳಕಂಡ ದಿನಾಂಕಗಳಂದು ರಾಜ್ಯ ಹಂತದಿಂದ ಪ್ರಗತಿ ಪರಿಶೀಲನಾ ಸಭೆ ಮತ್ತು ತಾಂತ್ರಿಕವಾಗಿ ಬೆಂಬಲ ನೀಡಲು ಒಂದು ದಿನ ಇನ್‌ಪುಟ್ ಸೆಷನ್ ನಡೆಸಲಾಗುವುದು. ತಪ್ಪದೇ ಜಿಲ್ಲಾ ಹಂತದ ತಾಂತ್ರಿಕ ತಂಡದ ಸದಸ್ಯರು ಭಾಗವಹಿಸಲು ಕ್ರಮವಹಿಸುವುದು.

**ವೇಳಾಪಟ್ಟಿ**

| **ತಿಂಗಳು** | ಪ್ರಗತಿ ಪರಿಶೀಲನಾ ಸಭೆ **ದಿನಾಂಕ** |
|---|---|
| ಜುಲೈ -23 | 05/07/2023 |
| ಆಗಸ್ಟ್-23 | 02/08/2023 |
| ಸೆಪ್ಟೆಂಬರ್-23 | 11/09/023 |
| ಅಕ್ಟೋಬರ್-23 | 04/10/2023 |

ಈ ಸಭೆಗಳಿಗೆ ಲಿಂಕ್‌ಗಳನ್ನು ಆಯಾ ಮಾಹೆಯಲ್ಲಿ ತಮ್ಮ ಡಯಟ್ ಹಂತದಲ್ಲಿಯೇ ಪರಿಶೀಲನಾ ಸಭೆ ನಡೆಸುವುದು ಹಾಗೂ ಡಿ.ಎಸ್.ಇ.ಆರ್.ಟಿ ನಿರ್ದೇಶನದಂತೆ ಕ್ರಮವಹಿಸುವುದು.

Signed by Sumangala V
Date: 22-06-2023 15:42:56
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಮತ್ತು ರಾಜ್ಯದ ಎಲ್ಲಾ ಸಿ.ಟಿ.ಇ ಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಮತ್ತು ತತ್ಸಮಾನ ವೃಂದದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ತತ್ಸಮಾನ ವೃಂದದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ವಿಭಾಗ, ಶಾಲಾ ಶಿಕ್ಷಣ ಇಲಾಖೆ ರವರಿಗೆ, ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
5. ಕಚೇರಿ ಪ್ರತಿ.